ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಪ್ರಜಾಯತ್ನ
ನಮ್ಮ ಕಲಿಕೆ. ನಮ್ಮ ಬದುಕು.

“ಪ್ರಜಾಯತ್ನ, ಅಭಿವೃದ್ಧಿ ಮತ್ತು ತರಬೇತಿ ಸಂಸ್ಥೆ"ಯಾಗಿದ್ದು, “ಪ್ರತಿ ಮಗು ಘನತೆಯೊಂದಿಗೆ ಬದುಕಬಲ್ಲ ಸಮಾಜವನ್ನು ನಿರ್ಮಾಣ ಮಾಡುವ ಆಶಯದೊಂದಿಗೆ ‘ಸಾಮರ್ಥ್ಯ ಆಧಾರಿತ ಕಲಿಕಾ ದೃಷ್ಟಿಕೋನ’ವನ್ನು, ಅಭಿವೃದ್ಧಿಪಡಿಸುತ್ತಾ, ಸಮುದಾಯ (ಭಾಗೀದಾರರ) ಒಡೆತನವನ್ನು ಸಾಂಸ್ಥೀಕರಿಸುವ ಪ್ರಕ್ರಿಯೆಯ ಮೂಲಕ ವ್ಯಾವಸ್ಥಿಕ ಸುಧಾರಣೆಯನ್ನು ಅನುಕೂಲಿಸುವ” ಚಿಂತನೆಯೊಂದಿಗೆ ಕಾರ್ಯನಿರ್ವಹಿಸುತ್ತಿದೆ.







ಸರ್ವ ಶಿಕ್ಷಣ ಅಭಿಯಾನ ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಪ್ರಜಾಯತ್ನ
ನಮ್ಮ ಕಲಿಕೆ, ನಮ್ಮ ಬದುಕು.

# ಸಮಗ್ರ ಶಿಕ್ಷಣ–ಕರ್ನಾಟಕ ಮತ್ತು ಪ್ರಜಾಯತ್ನ ಸಂಸ್ಥೆಯ ಜಂಟಿ ಸಹಯೋಗದಲ್ಲಿ

## ಗುಣಾತ್ಮಕ ಕಲಿಕಾ ಕಾರ್ಯಕ್ರಮ (ಕಲಿಕಾಯತ್ನ)

| | |
|---|---|
| ಕಾರ್ಯಕ್ರಮದ ವ್ಯಾಪ್ತಿ | ಯಾದಗಿರಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ, ಕಂದಕೂರು ಮತ್ತು ಅರಿಕೇರಾ ಕೆ. ಈ 2 ಕ್ಲಸ್ಟರ್‌ಗಳಲ್ಲಿರುವ, 21 ಸರ್ಕಾರಿ ಶಾಲೆಗಳು, 79 ಶಿಕ್ಷಕರು, 2384 ಮಕ್ಕಳು. |
| ಅನುಷ್ಠಾನದ ಭಾಗೀದಾರರು | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ, ಯಾದಗಿರಿ ಜಿಲ್ಲಾ, ತಾಲ್ಲೂಕು ಹಂತದ ಶಿಕ್ಷಣಾಧಿಕಾರಿಗಳು ಮತ್ತು ಪ್ರಜಾಯತ್ನ. |





# ಗುಣಾತ್ಮಕ ಕಲಿಕಾ ಕಾರ್ಯಕ್ರಮ (ಕಲಿಕಾಯತ್ನ)ದ ಉದ್ದೇಶಗಳು

- ಮಕ್ಕಳು ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವ, ಅನುಭವಾತ್ಮಕ ಕಲಿಕೆ ಅನುಕೂಲಿಸುವುದು.
- ಶಿಕ್ಷಕರು ಬೋಧನಾ ವಿಧಾನದಿಂದ, ಕಲಿಕೆ ಅನುಕೂಲಿಸಲು ಸಜ್ಜುಗೊಳ್ಳುವುದು.
- ನಿರಂತರ ಹಿಮ್ಮಾಹಿತಿ ಒದಗಿಸುವ ಮೌಲ್ಯಾಂಕನ ವಿಧಾನ ಅಭಿವೃದ್ಧಿಪಡಿಸುವುದು.
- ಎಸ್.ಡಿ.ಎಂ.ಸಿ, ಗ್ರಾಮ ಪಂಚಾಯಿತಿಗಳ ಸಾಂಸ್ಥಿಕ ಸಾಮರ್ಥ್ಯ ಬೆಳೆಸುವುದು.





# ಕಲಿಕೆ ಹೇಗಾಗುತ್ತದೆ ಎಂಬುದರ ಸೈದ್ಧಾಂತಿಕ ನೆಲೆಗಟ್ಟುಗಳು



1. ಪ್ರತಿ ಮಗುವು ಕಲಿಯಲು ಸಮರ್ಥರಿರುತ್ತಾರೆ.
2. ಪ್ರತಿ ಮಗುವು ವಿಭಿನ್ನ – ಆದ್ದರಿಂದಲೇ ವೈಯಕ್ತಿಕವಾಗಿ ಸಂಬಂಧಿಸುತ್ತಾರೆ.
3. ಎಲ್ಲಾ ಸನ್ನಿವೇಶದಲ್ಲಿಯೂ ಕಲಿಕೆ ನಿರಂತರವಾಗಿರುತ್ತದೆ.
4. ಮುಕ್ತ ಮತ್ತು ನಿರ್ಭಯ ವಾತಾವರಣದಲ್ಲಿ ಕಲಿಕಾದಾರರ ಕ್ರಿಯಾಶೀಲ ತೊಡಗಿಸಿಕೊಳ್ಳುವಿಕೆಯಿಂದ ಸಹಜವಾಗಿ ಕಲಿಕೆಯಾಗುತ್ತದೆ.



5. ಕಲಿಕೆಯು ಅನುಭವ ಮತ್ತು ಅವಲೋಕನದಿಂದ ಆಗುತ್ತದೆ.
6. ಕಲಿಕೆ ಮತ್ತು ಮೌಲ್ಯಮಾಪನವು ಜೊತೆ ಜೊತೆಗೇ ಸಾಗುತ್ತವೆ.
7. ಶಿಕ್ಷಕರು ಕಲಿಕೆಯ ಅನುಕೂಲಗಾರರು.
8. ಕಲಿಕೆಯ ಉದ್ದೇಶವು ಏಕರೂಪದ ವ್ಯಕ್ತಿಗಳನ್ನು ಸೃಷ್ಟಿಸುವುದಲ್ಲ; ಬದಲಾಗಿ ಮಕ್ಕಳಲ್ಲಿರುವ ಆಂತರಿಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವುದು.

# ಕಲಿಕಾಯತ್ನ ಪ್ರಕ್ರಿಯೆಯ ಮುಖ್ಯ ಕ್ಷೇತ್ರಗಳು

- ✓ ಅನುಭವಾತ್ಮಕ ಕಲಿಕೆ (Experiential Learning)
- ✓ ಸಹಭಾಗಿತ್ವದ ಕಲಿಕೆ (Collaborative learning)
- ✓ ಪರಿಕಲ್ಪನೆ ಅನುಕೂಲಗಾರಿಕೆ (Concept facilitation)
- ✓ ನಿರಂತರ ಮೌಲ್ಯಮಾಪನ (Continuous Assessment)
- ✓ ಶಿಕ್ಷಕರ ಸಬಲೀಕರಣ (Teacher Empowerment)






# ಕಲಿಕಾ ಪ್ರಕ್ರಿಯೆ – Learning Process

ಮಕ್ಕಳು ಪರಿಕಲ್ಪನೆಗಳ ಮೂಲಕ ವಿಷಯವಸ್ತುವನ್ನು ಸಂಪೂರ್ಣ, ಸಮಗ್ರವಾಗಿ ಅರ್ಥೈಸಿಕೊಳ್ಳಲು ಮತ್ತು ವಿಷಯವಾರು ಕೌಶಲಗಳು – ಸಾಮರ್ಥ್ಯಗಳು ಹಾಗೂ 21ನೇ ಶತಮಾನದ ಸಾಮರ್ಥ್ಯಗಳು, ಜೀವನ ಕೌಶಲಗಳನ್ನು ಬೆಳೆಸಿಕೊಳ್ಳಲು ಅನುಕೂಲಿಸುವ ಉದ್ದೇಶದಿಂದ ಗುಣಾತ್ಮಕ ಕಲಿಕಾ ಕಾರ್ಯಕ್ರಮದ ಕಲಿಕಾ ಪ್ರಕ್ರಿಯೆಯ ಚಿತ್ರಣ.





# ಗುಣಾತ್ಮಕ ಕಲಿಕಾ ಕಾರ್ಯಕ್ರಮದ ಒಂದು ದಿನದ ತರಗತಿ ಪ್ರಕ್ರಿಯೆ ನೋಟ



ಇಡೀ ಗುಂಪು
Whole Group

Exposure - **Engage**
ಪರಿಚಯಿಸುವುದು-ತೆರೆದುಕೊಳ್ಳುವುದು-ತೊಡಗಿಸಿಕೊಳ್ಳುವುದು



ಕಲಿಕಾ ಗುಂಪು
Learner Group

Experience - **Expand**
ಅನುಭವ-ಕಲಿಕೆಯನ್ನು ವಿಸ್ತರಿಸುವುದು



ವಿಷಯ ಮಂಡನೆ
Presentation

**Express/Explain**
ಅವಲೋಕನ & ಮರುಮಾಹಿತಿ
ಅಭಿವ್ಯಕ್ತಿಸುವುದು/ವಿವರಿಸುವುದು.


Reflection &
Feedback
**Evaluation**
ಮೌಲ್ಯಮಾಪನ



**Individual Practice**
ವೈಯಕ್ತಿಕ ಅಭ್ಯಾಸ

**Practice & Apply**
ಅಭ್ಯಾಸ & ಅನ್ವಯ

# ಕುಟುಂಬ ಪರಿಕಲ್ಪನೆ ನಕ್ಷೆ – Family Concept Map



# ಗುಣಾತ್ಮಕ ಕಲಿಕಾ ಕಾರ್ಯಕ್ರಮ-ಕಲಿಕಾಯತ್ನದ ಅನುಷ್ಠಾನ ವಿಧಾನ



ಶಿಕ್ಷಕರ ಸಮಷ್ಟಿ ಸಭೆಯಲ್ಲಿ ಆ ತಿಂಗಳ ಪರಿಕಲ್ಪನೆಯ ಆಯ್ಕೆ.

ಪರಿಕಲ್ಪನಾ ನಕ್ಷೆ ವಿಸ್ತರಣೆ ಮತ್ತು ಕಲಿಕಾ ಫಲಿತಾಂಶಗಳ ಯೋಜನೆ ಸಿದ್ಧತೆ.

ಇಡೀ ಗುಂಪು, ಕಲಿಕಾ ಗುಂಪುಗಳು, ವಿಷಯ ಮಂಡನೆ, ಅಭ್ಯಾಸ ಅವಧಿಗಳ ಮೂಲಕ ಪರಿಕಲ್ಪನೆ ಅರ್ಥೈಸಿಕೊಳ್ಳಲು ಅನುಕೂಲಿಸುವುದು.

ಮಕ್ಕಳು ಬರೆದಿರುವ ಬರವಣಿಗೆ, ಲೆಕ್ಕಗಳು, ಚಿತ್ರ, ಮಾದರಿ ಇತ್ಯಾದಿಗಳು ವೈಯಕ್ತಿಕ ಕೃತಿಸಂಪುಟಕ್ಕೆ ದಾಖಲಾಗುತ್ತದೆ.



ಶಿಕ್ಷಕರ ಟಿಪ್ಪಣಿ, ಕೃತಿಸಂಪುಟದಲ್ಲಿರುವ ಅಂಶಗಳನ್ನು ಕ್ರೋಡೀಕರಿಸುವ ಮೂಲಕ ಮಕ್ಕಳ ಕಲಿಕಾ ಹಂತಗಳನ್ನು ಗುರುತಿಸಲಾಗುತ್ತದೆ.

# ಕೋವಿಡ್ ಸಂದರ್ಭದಲ್ಲಿ ನಡೆಸಿರುವ ಪ್ರಕ್ರಿಯೆಗಳು & ವಿತರಿಸಿರುವ ಪರಿಕರಗಳು

- ವಾಟ್ಸಪ್ ಗುಂಪು ರಚನೆ, ಪರಿಕಲ್ಪನೆಗಳ ಇ–ಕಂಟೆಂಟ್ ಒದಗಿಸಿ, ಕಲಿಕೆಯಲ್ಲಿ ತೊಡಗಿಸಲಾಗಿದೆ.
- ಶಾಲೆಗೆ ರಜೆ ಇದ್ದ ಕಾರಣ ಮಕ್ಕಳನ್ನು ಫೋನ್ ಮೂಲಕ ಸಂಪರ್ಕಿಸಿ, ಕಲಿಕೆಗೆ ಬೆಂಬಲಿಸಲಾಗಿದೆ.
- ಕೀ ಪ್ಯಾಡ್ ಮೊಬೈಲ್ ಪೋನ್ ಹೊಂದಿದ್ದ ಪೋಷಕರಿಗೆ ಇ–ಕಂಟೆಂಟ್‌ನ ಆಡಿಯೋ ಕಳುಹಿಸಲಾಗಿದೆ.
- ಕುಟುಂಬ, ನಮ್ಮ ದೇಹ ಮುಂತಾದ ಪರಿಕಲ್ಪನೆಗಳ ಅಭ್ಯಾಸದ ಹಾಳೆಗಳನ್ನು ಮಕ್ಕಳ ಮನೆಗೆ ಒದಗಿಸಲಾಗಿದೆ.
- 21 ಶಾಲೆಗಳ 2979 ಮಕ್ಕಳಿಗೆ ಹೋಂ ಲರ್ನಿಂಗ್ ಕಿಟ್ ಒದಗಿಸಿ ಕಲಿಕೆಯಲ್ಲಿ ತೊಡಗಲು ಅನುಕೂಲಿಸಲಾಯಿತು.
- ವಠಾರಗಳಲ್ಲಿ ಮಕ್ಕಳನ್ನು ಚಿಕ್ಕ ಚಿಕ್ಕ ಗುಂಪು ಮಾಡಿ ಕಲಿಕೆಯಲ್ಲಿ ತೊಡಗಿಸಲಾಯಿತು.
- ಶಾಲೆಗಳಿಗೆ ಸ್ವಚ್ಛತಾ ಕಿಟ್ ವಿತರಿಸಿ, ಮಕ್ಕಳು ಕೈತೊಳೆಯುವ, ಸ್ವಚ್ಛತೆ ಕಾಪಾಡುವ ಡೆಮೋ ಪ್ರಕ್ರಿಯೆಯನ್ನು ಮಾಡಲಾಗಿದೆ.


# ಕೋವಿಡ್ ರಜೆ ಮುಗಿದು ಶಾಲೆಗಳು ಪ್ರಾರಂಭವಾದ ನಂತರ ನಡೆಸಿರುವ ಪ್ರಕ್ರಿಯೆಗಳು & ವಿತರಿಸಿರುವ ಪರಿಕರಗಳು:


- ಮಕ್ಕಳ ಬೇಸ್‌ಲೈನ್ ಪ್ರಕ್ರಿಯೆ.
- ಶಿಕ್ಷಕರ ಸಮಷ್ಟಿ ಸಭೆಗಳು ಮತ್ತು ಅತಿಥಿ ಶಿಕ್ಷಕರ ಕಾರ್ಯಾಗಾರಗಳು.
- ಹೊಸ ಎಸ್.ಡಿ.ಎಂ.ಸಿ ಸಮಿತಿ ರಚನಾ ಸಭೆಗಳು.
- ಎಸ್.ಡಿ.ಎಂ.ಸಿ ಸದಸ್ಯರ ತರಬೇತಿ ಕಾರ್ಯಾಗಾರಗಳು.
- ವಿಶೇಷ ದಾಖಲಾತಿ ಆಂಧೋಲನ ಕಾರ್ಯಕ್ರಮ.
- ಶಾಲಾ ಹಂತದ ಎಸ್.ಡಿ.ಎಂ.ಸಿ, ಪೋಷಕರ ಸಭೆಗಳು
- ಮುಖ್ಯ ಶಿಕ್ಷಕರ ಶೈಕ್ಷಣಿಕ ಪ್ರಗತಿ ಪರಿಶೀಲನಾ ಸಭೆಗಳು.
- ಶಾಲಾ ಹಂತದಲ್ಲಿ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರ ಯೋಜನಾ ಸಭೆಗಳು.
- 67 ರೀತಿಯ ಲೈಬ್ರರಿ ಪುಸ್ತಕಗಳು ಮತ್ತು ತೆರೆದ ವುಡನ್ ರ್‍ಯಾಕ್ ಒದಗಿಸಲಾಗಿದೆ.
- 1–5ನೇ ತರಗತಿಯ ಎಲ್ಲಾ ಮಕ್ಕಳಿಗೆ ಪ್ರತಿವರ್ಷ ಕಲಿಕಾ ಸಾಮಗ್ರಿಗಳನ್ನು ಒದಗಿಸಲಾಗಿದೆ.
- 13 ರೀತಿಯ ಆಟ ಮತ್ತು ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗಿದೆ.
- ದೈನಂದಿನ ತರಗತಿ ಯೋಜನಾ ಪುಸ್ತಕ ಮತ್ತು ಕಲಿಕೆ ಕ್ರೋಡೀಕರಣ ಪುಸ್ತಕಗಳನ್ನು ಒದಗಿಸಲಾಗಿದೆ.
- ಮಕ್ಕಳ ಕಲಿಕಾ ಮೌಲ್ಯಮಾಪನ ಸಾಧನಗಳು ಮತ್ತು ಪ್ರಗತಿ ಪತ್ರಗಳನ್ನು ಒದಗಿಸಲಾಗಿದೆ.
- ಶಿಕ್ಷಕರ ಶೈಕ್ಷಣಿಕ ಕ್ಷೇತ್ರ ಭೇಟಿ ಕಾರ್ಯಕ್ರಮವನ್ನು ನಡೆಸಲಾಗಿದೆ.

# ಪರಿಣಾಮ

- 20 ಶಾಲೆಗಳಲ್ಲಿ  ಹೊಸ ಎಸ್.ಡಿ.ಎಂ.ಸಿ ಸಮಿತಿಗಳನ್ನು ರಚನೆ ಮಾಡಲಾಗಿದೆ.
- ವಿಶೇಷ ದಾಖಲಾತಿ ಆಂಧೋಲನದ ಮೂಲಕ 253 ಮಕ್ಕಳನ್ನು ದಾಖಲಿಸಿಕೊಳ್ಳಲಾಗಿದೆ.
- ದಾನಿಗಳಿಂದ 21 ಶಾಲೆಗೆ 2 ಲೀ.ಕಪ್ಪು ಹಲಗೆ ಬಣ್ಣ, 2 ಪ್ಯಾಕ್ ಬಣ್ಣದ ಸೀಮೆಸುಣ್ಣ ಒದಗಿಸಲಾಗಿದೆ.
- ವಿವಿಧ ಭಾಗೀದಾರರಿಂದ 2130 ಕೃತಿಸಂಪುಟಗಳನ್ನು ಪಡೆದು ಮಕ್ಕಳಿಗೆ ವಿತರಿಸಲಾಗಿದೆ.
- 21 ಶಾಲೆಗಳಲ್ಲಿ ಮಕ್ಕಳ ಕೃತಿ ಸಂಪುಟಗಳನ್ನು ನಿರ್ವಹಣೆ ಮಾಡಿದ್ದಾರೆ.
- ಇಲಾಖೆಯ ಜಿಲ್ಲೆ, ತಾಲ್ಲೂಕು ಮಟ್ಟದ ಅಧಿಕಾರಿಗಳು ಸಮಷ್ಟಿ ಸಭೆಗಳು, ಶಾಲೆಗಳಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿ ಹಿಮ್ಮಾಹಿತಿ ಒದಗಿಸುತ್ತಿದ್ದಾರೆ.
- ಇಸಿಒ, ಬಿ.ಆರ್.ಪಿ, ಬಿ.ಐ.ಇ.ಆರ್.ಟಿ. ಸಿ.ಆರ್.ಪಿಗಳು ತರಗತಿ ಪ್ರಕ್ರಿಯ ವೀಕ್ಷಣೆ ಮಾಡಿ ಸೂಕ್ತ ಹಿಮ್ಮಾಹಿತಿ ಒದಗಿಸುತ್ತಿದ್ದಾರೆ.
- ಸಿ.ಆರ್.ಪಿಗಳು ಸಮಷ್ಟಿ ಸಭೆಗಳನ್ನು ಅನುಕೂಲಿಸುತ್ತಿದ್ದಾರೆ.
- ಶಿಕ್ಷಕರು ಸಾಮರ್ಥ್ಯ ಆಧಾರಿತ ಕಲಿಕೆಯನ್ನು ಅನುಕೂಲಿಸಲು ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ.
- 2022–23ನೇ ಸಾಲಿನ 10ನೇ ತರಗತಿಯಲ್ಲಿ ಶೇಕಡ 45 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.
- ಶೇಕಡ 65 ರಷ್ಟು ಇದ್ದ ಮಕ್ಕಳ ಹಾಜರಾತಿ 82 ರಷ್ಟು ಹೆಚ್ಚಾಗಿದೆ.
- ಪೋಷಕರು ಮತ್ತು ಎಸ್.ಡಿ.ಎಂ.ಸಿ ಸದಸ್ಯರು ಶಾಲಾಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದಾರೆ.
- ಗ್ರಾಮ ಪಂಚಾಯಿತಿಗಳು ಶಾಲೆಗಳ ಶೈಕ್ಷಣಿಕ ಮತ್ತು ಭೌತಿಕ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಂಡಿವೆ.


# ಮಕ್ಕಳ ಕಲಿಕಾ ಪ್ರಗತಿ ನಕ್ಷೆ




# ಶಿಕ್ಷಕರ ಸಬಲೀಕರಣ ಪ್ರಗತಿ ನಕ್ಷೆ

| ಕ್ರ.ಸಂ | ಶಿಕ್ಷಕರ ಸಶಕ್ತೀಕರಣ ಅಂಶಗಳು | ವಿಕಸನದ ಹಾದಿ | ಆಸಕ್ತಿವುಳ್ಳವರು | ತೊಡಗಿಸಿಕೊಂಡವರು | ಸ್ವತಂತ್ರ | ಒಟ್ಟು |
|---|---|---|---|---|---|---|
| 1 | ಯೋಜನೆರೂಪಿಸುವುದು– Planning | 1 | 5 | 46 | 29 | 81 |
| 2 | ವೀಕ್ಷಣೆ/ಗಮನಿಸುವಿಕೆ – Observation | 1 | 6 | 43 | 31 | 81 |
| 3 | ಅನುಕೂಲಗಾರಿಕೆ – Facilitation | 4 | 6 | 46 | 25 | 81 |
| 4 | ದಾಖಲೀಕರಣ–Documentaion | 3 | 8 | 48 | 22 | 81 |
| 5 | ಮನೋಧೋರಣೆ –Attitude | 3 | 5 | 51 | 22 | 81 |
| 6 | ಸಮುದಾಯದೊಂದಿಗಿನ ಸಂಬಂಧ – Relationwith Community | 4 | 1 | 43 | 33 | 81 |
| | ಒಟ್ಟು ಅಂಶಗಳು | 16 | 31 | 277 | 162 | 486 |
| | ಶೇಕಡಾವಾರು ಒಟ್ಟು | 2.6666667 | 5.16667 | 46.1667 | 27 | 81 |
| | ಒಟ್ಟು | 3 | 5 | 46 | 27 | 81 |



# ಕಾರ್ಯಕ್ರಮ ಅನುಷ್ಠಾನ ತಂಡದ ಸ್ವರೂಪ
# ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಯಾದಗಿರಿ ಮತ್ತು ಪ್ರಜಾಯತ್ನ

| ಕಾರ್ಯಕ್ರಮ ನಿರ್ವಹಣೆ ಮಾಡುವ ತಂಡ | ತರಗತಿ ವೀಕ್ಷಣೆ ಮತ್ತು ಹಿಮ್ಮಾಹಿತಿ ನೀಡುವ ತಂಡ |
|---|---|
| ಉಪನಿರ್ದೇಶಕರು<br>(ಆಡಳಿತ ಮತ್ತು ಅಭಿವೃದ್ಧಿ)<br>ಕ್ಷೇತ್ರ ಶಿಕ್ಷಣಾಧಿಕಾರಿಗಳು<br>ಜಿಲ್ಲಾ ಸಮನ್ವಯಾಧಿಕಾರಿಗಳು<br>ಡಯಟ್‌ನ ಬ್ಲಾಕ್ ನೋಡಲ್ ಅಧಿಕಾರಿಗಳು<br>ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು<br>ಶಿಕ್ಷಣ ಸಂಯೋಜಕರು<br>ಬಿ.ಆರ್.ಪಿ.ಗಳು<br>ಬಿ.ಐ.ಇ.ಆರ್.ಟಿ.ಗಳು<br>ಸಿ.ಆರ್.ಪಿ.ಗಳು<br>ಪ್ರಜಾಯತ್ನ ಪ್ರತಿನಿಧಿಗಳು | ಕ್ಷೇತ್ರ ಶಿಕ್ಷಣಾಧಿಕಾರಿಗಳು<br>ಜಿಲ್ಲಾ ಸಮನ್ವಯಾಧಿಕಾರಿಗಳು<br>ಡಯಟ್‌ನ ಬ್ಲಾಕ್ ನೋಡಲ್ ಅಧಿಕಾರಿಗಳು<br>ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು<br>ಶಿಕ್ಷಣ ಸಂಯೋಜಕರು<br>ಬಿ.ಐ.ಇ.ಆರ್.ಟಿ.ಗಳು<br>ಬಿ.ಆರ್.ಪಿ.ಗಳು<br>ಸಿ.ಆರ್.ಪಿ.ಗಳು<br>ಪ್ರಜಾಯತ್ನ ಪ್ರತಿನಿಧಿಗಳು |


thank you

